# ಆಹಾ ಸುದ್ದಿ!

★ ಸಸಿತೋಟ

ಜಪಾನಿನ ಮೊಬೈಲ್ ಕಂಪೆನಿ ಡೊಕೊಮೊ ಅಲ್ಲಿಯ ನರಿಟಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟಾಯ್ಲೆಟ್ ಪೇಪರ್ ಡಿಸ್ಪೆನ್ಸರ್ ಮಷಿನ್ ಇಟ್ಟಿದೆಯಂತೆ. ಇದು ಶೌಚಾಲಯ ಬಳಸಿದ ನಂತರವಲ್ಲ, ಮೊಬೈಲ್ ಫೋನ್ ಶುಚಿ ಮಾಡಲಂತೆ. ಟಾಯ್ಲೆಟ್ ಸೀಟ್ ಮೇಲಿರುವುದಕ್ಕಿಂತ ಐದು ಪಟ್ಟು ಹೆಚ್ಚಿನ ರೋಗಾಣುಗಳು ಮೊಬೈಲ್ ಫೋನಿನ ಸ್ಕ್ರೀನ್ ಮೇಲೆ ಪತ್ತೆಯಾಗಿರುವುದೇ ಇದಕ್ಕೆ ಕಾರಣವಂತೆ. ಮಂದಿ ಶೌಚಾಲಯದಲ್ಲಿ ಮೊಬೈಲ್ ಎಲ್ಲೆಲ್ಲಿ ಇಟ್ಟು, ಏನೇನು ಮಾಡುತ್ತಾರೆ ಎಂಬುದು ಈ ರೀತಿ ಬಹಿರಂಗವಾಗಬಾರದಿತ್ತು.



ಆಫ್ರಿಕಾದ ಈ ಕಾಡಾನೆ ಜಾಂಬಿಯಾದ ಹೊಟೇಲ್‌ಗೆ ಹೋಗಿ ಸ್ವಾಗತಕಾರರ ಡೆಸ್ಕ್ ಮುಂದೆ ನಿಂತು ಗಂಟೆ ಅಮುಕಿ ಕೊಠಡಿ ಬುಕ್ ಮಾಡುವಂತೆ ನಿಂತಿದೆ. ಒಬ್ಬರಿಗೇನೋ ಹೊಟೇಲ್‌ನವರು ಕೊಠಡಿ ನೀಡುತ್ತಿದ್ದರೇನೋ, ಆದರೆ ಹೊರಗಡೆ ಮೂವರು ಕುಟುಂಬದ ಸದಸ್ಯರೂ ನಿಂತಿದ್ದರಂತೆ.



ಕಂಡ ಕಂಡ ಕಡೆ ವಾಹನವನ್ನು ನಿಲ್ಲಿಸುವವರಿಗೆ ಚೀನಾದ ರಸ್ತೆ ಕಸ ಗುಡಿಸುವ ಕಾರ್ಮಿಕ ಈ ರೀತಿ ಬುದ್ಧಿ ಕಲಿಸಲು ಹೊರಟಿದ್ದಾನೆ. ಒಟ್ಟು 42 ಕಸದ ತೊಟ್ಟಿಗಳನ್ನು ಕಾರಿನ ಸುತ್ತ ನಿಲ್ಲಿಸಿ ಕಾರನ್ನು ಹೊರ ತೆಗೆಯದಂತೆ ನಿರ್ಬಂಧ ವಿಧಿಸಿದನಂತೆ. ಈ ರೀತಿ 'ಬೀದಿ ನ್ಯಾಯ'ವನ್ನು ಬೆಂಗಳೂರಿನಲ್ಲಿ ನೀಡ ಹೊರಟರೆ ಕಸದ ತೊಟ್ಟಿಗಳ ಕೊರತೆ ತಲೆದೋರಬಹುದು.



ಚೀನಾದ ಶಾಂಕ್ಸಿ ಪ್ರಾಂತ್ಯದಲ್ಲಿ ಯುವಕನೊಬ್ಬ 1500 ಸೋಯಾ ಹಾಲಿನ ಬಾಟಲ್‌ಗಳನ್ನು ಹೃದಯದ ಆಕಾರದಲ್ಲಿ ನಿಲ್ಲಿಸಿ ಅದರ ಮುಂದೆ ತನ್ನ ಪ್ರೇಯಸಿಗೆ ಮದುವೆ ಪ್ರಸ್ತಾವ ಮಾಡಿದನಂತೆ. ಆತನ ಲ್ಯಾಕ್ಟೋಸ್ ಮುಕ್ತ ಪ್ರೇಮ ನಿವೇದನೆ ಯಶಸ್ವಿಯೇನೋ ಆಯ್ತಂತೆ. ಆದರೆ ನಂತರ ನೆರೆದವರಿಗೆ ಆ ಬಾಟಲ್‌ಗಳನ್ನು ಉಚಿತವಾಗ ಹಂಚಲು ಹೊರಟಿದ್ದೇ ತಡ ಹೃದಯವೇ ಚೂರುಚೂರಾಯ್ತಂತೆ, ನೂಕುನುಗ್ಗಲಿನಿಂದ.

ಪ್ರೇಯಸಿಯನ್ನು ಖುಷಿಪಡಿಸಲು ನೂರೊಂದು ಸೂತ್ರಗಳು ಸಾಲದೇ ರಷ್ಯಾದ ವ್ಯಕ್ತಿಯೊಬ್ಬ 102ನೇ ಸೂತ್ರವನ್ನು ಮಾಡಲು ಹೋಗಿ ಈಗ ಜೈಲು ಪಾಲಾಗಿದ್ದಾನಂತೆ. ಅಲ್ಲಿಯ ವಿಮಾನ ನಿಲ್ದಾಣದಲ್ಲಿ ತನ್ನ ಪ್ರೇಯಸಿಯನ್ನು ಸ್ವಾಗತಿಸಲು ಸೀದಾ ಕಾರಿನಲ್ಲೇ ವಿಮಾನ ನಿಲ್ದಾಣದ ಚೆಕ್‌ಇನ್ ಡೆಸ್ಕ್ ಛಿದ್ರ ಮಾಡಿ ಒಳಗೆ ನುಗ್ಗಿದ ಆತ ಹೋಗಿ ಬಿದ್ದಿದ್ದು ಮಾತ್ರ ಪ್ರಿಯತಮೆಯ ಬದಲು ಪೊಲೀಸರ ತೋಳಿನಲ್ಲಿ.



ಚೀನಾದ ಈ ನರ್ತಕಿ –37 ಡಿ.ಸೆ. ಶೈತ್ಯದಲ್ಲಿ ಹಿಮಗಟ್ಟಿದ ಮರದ ಮೇಲೆ ನರ್ತಿಸಿದಳಂತೆ. ಅಲ್ಲಿಯ ಮೋಹೆ ಪ್ರಾಂತ್ಯದಲ್ಲಿ ಆಕೆ ಈ ಸಾಧನೆ ಮಾಡಿದ್ದಾಳೆ.